ಕರ್ನಾಟಕ ಸರ್ಕಾರ

ಜಲಾನಯನ ಅಭಿವೃದ್ಧಿ ಇಲಾಖೆ

**ವಿಷಯ:** ಜಲಾನಯನ ಅಭಿವೃದ್ಧಿ ಇಲಾಖೆಯ, KWDP-II (ಸುಜಲ-III) ಯೋಜನೆಯಡಿಯ ವೆಚ್ಚ ಪಾವತಿಗಾಗಿ ತೋಟಗಾರಿಕೆ ವಿಶ್ವವಿದ್ಯಾಲಯ, ಬಾಗಲಕೋಟೆ ಸಂಸ್ಥೆಗೆ ರೂ.5,51,422.00 ಅನುದಾನ ವರ್ಗಾಯಿಸುವ ಬಗ್ಗೆ.

**ಉಲ್ಲೇಖ:**
1. UHS ಬಾಗಲಕೋಟೆ ಸಂಸ್ಥೆಯೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆ ದಿನಾಂಕ 11.02.2019
2. ಈ ಕಛೇರಿ ಪತ್ರ ಸಂಖ್ಯೆ: WDD/ED/KWDP-II(Sujala-III)Corr.NBSSLUP/2018-19 ದಿನಾಂಕ:21.01.2020
3. UHS, ಬಾಗಲಕೋಟೆ ಸಂಸ್ಥೆಯ ಪತ್ರ ಸಂಖ್ಯೆ:RO/UHS-B//2020-21, ದಿನಾಂಕ:17.06.2020

*********

**ಪೀಠಿಕೆ:-**

ವಿಶ್ವಬ್ಯಾಂಕ್ ನೆರವಿನ KWDP-II (ಸುಜಲ-III) EAP ಯೋಜನೆಯನ್ನು ಅನುಷ್ಠಾನಗೊಳಿಸುವ ಸಲುವಾಗಿ ಉಲ್ಲೇಖ(2)ರಲ್ಲಿ ತೋಟಗಾರಿಕೆ ವಿಶ್ವವಿದ್ಯಾಲಯ, ಬಾಗಲಕೋಟೆ ಸಂಸ್ಥೆಯೊಂದಿಗೆ ರೂ.826.03 ಲಕ್ಷ ಮೊತ್ತದ ಪರಿಷ್ಕೃತ ಒಡಂಬಡಿಕೆಯನ್ನು ಮಾಡಿಕೊಳ್ಳಲಾಗಿದ್ದು, (ಉಲ್ಲೇಖ-1) ಯೋಜನೆಯಡಿ ಒಟ್ಟು ರೂ.8,02,68,600.00 ಲಕ್ಷಗಳನ್ನು ಸದರಿ ಸಂಸ್ಥೆಗೆ ಬಿಡುಗಡೆ ಮಾಡಲಾಗಿರುತ್ತದೆ. ಸುಜಲ-III ಯೋಜನೆಯು ದಿನಾಂಕ 31.12.2019 ರಂದು ಮುಕ್ತಾಯಗೊಂಡ ಹಿನ್ನೆಲೆಯಲ್ಲಿ ಉಲ್ಲೇಖ(2) ರ ಈ ಕಚೇರಿ ಪತ್ರದ ಮೂಲಕ ಸೂಚಿಸಲಾದಂತೆ, ಯೋಜನೆಯಡಿ ಬಿಡುಗಡೆಯಾದ ಅನುದಾನದಲ್ಲಿ ವೆಚ್ಚವಾಗದೆ ಉಳಿಕೆಯಾದ ರೂ.37,34,210.00 (ಬ್ಯಾಂಕ್ ಬಡ್ಡಿ ಮೊತ್ತ ಸೇರಿ) ಮೊತ್ತವನ್ನು ತೋಟಗಾರಿಕೆ ವಿಶ್ವವಿದ್ಯಾಲಯ ಬಾಗಲಕೋಟೆ ಸಂಸ್ಥೆಯಿಂದ ಜಲಾನಯನ ಅಭಿವೃದ್ಧಿ ಇಲಾಖೆ ಖಾತೆಗೆ (Account of Chief Executive Officer SLNA, Watershed Development Department -Account No.:04462010093831, Syndicate Bank, BWSSB ಶಾಖೆ, ಮೈಸೂರು ಬ್ಯಾಂಕ್ ವೃತ್ತ, ಬೆಂಗಳೂರು) ಮರುಪಾವತಿಸಲಾಗಿರುತ್ತದೆ.

ತದನಂತರ, ತೋಟಗಾರಿಕೆ ವಿಶ್ವವಿದ್ಯಾಲಯ, ಬಾಗಲಕೋಟೆ ಸಂಸ್ಥೆಯವರು ಉಲ್ಲೇಖ(3) ರ ಪತ್ರದ ಮೂಲಕ ವೆಚ್ಚವಾಗದೇ ಉಳಿಕೆಯಾದ ಅನುದಾನ ಮೊತ್ತವನ್ನು ಜ.ಅ.ಇಲಾಖೆಗೆ ಪಾವತಿಸುವಾಗ ಯೋಜನೆಗೆ ಸಂಬಂಧಿಸಿದ ನಕ್ಷೆ ಹಾಗೂ ವರದಿಗಳ ಮುದ್ರಣ ವೆಚ್ಚಕ್ಕೆ ಸಂಬಂಧಿಸಿದ ಮೊತ್ತವನ್ನು ಉಳಿಸಿಕೊಳ್ಳದೆ ಹಾಲಿ ಖಾತೆಯಲ್ಲಿದ್ದ ಪೂರ್ಣ ಮೊತ್ತವನ್ನು ವರ್ಗಾಯಿಸಲಾಗಿರುತ್ತದೆ ಮತ್ತು ಸದರಿ ಮುದ್ರಣ ಕಾರ್ಯ ಡಿಸೆಂಬರ್ 2019 ಮಾಹೆಯಲ್ಲಿ ಪೂರ್ಣಗೊಂಡಿದ್ದು ಹಣ ಪಾವತಿ ಬಾಕಿಯಿರುತ್ತದೆಯೆಂದು ತಿಳಿಸಿದ್ದು, ಇದರ ವೆಚ್ಚವನ್ನು ಸಂಬಂಧಿತ ಏಜೆನ್ಸಿಗೆ ಪಾವತಿಸಲು ಒಟ್ಟು ರೂ.5,51,422.00 (ರೂ. ಐದು ಲಕ್ಷದ ಐವತ್ತೊಂದು ಸಾವಿರದ ನಾಲ್ಕು ನೂರ ಇಪ್ಪತ್ತೆರೆಡು ಮಾತ್ರ) ಅನುದಾನ ಮರುಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಆದಕಾರಣ, ಉಲ್ಲೇಖ(3) ರಲ್ಲಿ ಕೋರಿರುವ ರೂ.5,51,422.00 (ರೂ. ಐದು ಲಕ್ಷದ ಐವತ್ತೊಂದು ಸಾವಿರದ ನಾಲ್ಕು ನೂರ ಇಪ್ಪತ್ತೆರೆಡು ಮಾತ್ರ) ಅನುದಾನವನ್ನು ಈ ಕಛೇರಿಯ Account of Chief Executive Officer SLNA, Watershed Development Department -Account No.:04462010093831, Syndicate Bank, BWSSB ಶಾಖೆ, ಮೈಸೂರು ಬ್ಯಾಂಕ್ ವೃತ್ತ, ಬೆಂಗಳೂರು) ಖಾತೆಯಿಂದ ತೋಟಗಾರಿಕೆ ವಿಶ್ವವಿದ್ಯಾಲಯ, ಬಾಗಲಕೋಟೆ ಸಂಸ್ಥೆಗೆ ಮರುವರ್ಗಾಯಿಸಲು ಅನುಮೋದಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಕಛೇರಿ ಆದೇಶ ಸಂಖ್ಯೆ:ವಿ.ಬ್ಯಾಂಕ್:ಸುಜಲ-III: UHS ಬಾಗಲಕೋಟೆ-ಅ.ಬಿಡುಗಡೆ:2020-21 ದಿನಾಂಕ:30.06.2020**

ಪೀಠಿಕೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ, ತೋಟಗಾರಿಕೆ ವಿಶ್ವವಿದ್ಯಾಲಯ, ಬಾಗಲಕೋಟೆ ಸಂಸ್ಥೆಗೆ ಸುಜಲ-III ಯೋಜನೆಯಡಿಯ ನಕ್ಷೆ ಮತ್ತು ವರದಿಗಳ ಮುದ್ರಣ ಮತ್ತು ಬೈಂಡಿಂಗ್ ವೆಚ್ಚ ಭರಿಸಲು ಒಟ್ಟು ರೂ.5,51,422.00 (ರೂ. ಐದು ಲಕ್ಷದ ಐವತ್ತೊಂದು ಸಾವಿರದ ನಾಲ್ಕು ನೂರ ಇಪ್ಪತ್ತೆರೆಡು ಮಾತ್ರ) ಅನುದಾನವನ್ನು ಸಂಸ್ಥೆಯ ಸುಜಲ-III ಯೋಜನಾ ಖಾತೆಗೆ ಈ ಕಛೇರಿಯ Account of Chief Executive Officer SLNA, Watershed Development Department -Account No.:04462010093831, Syndicate Bank, BWSSB ಶಾಖೆ, ಮೈಸೂರು ಬ್ಯಾಂಕ್ ವೃತ್ತ, ಬೆಂಗಳೂರು) ಖಾತೆಯಿಂದ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಮರುವರ್ಗಾಯಿಸಲು ಆದೇಶಿಸಿದೆ.

ತೋಟಗಾರಿಕೆ ವಿಶ್ವವಿದ್ಯಾಲಯ, ಬಾಗಲಕೋಟೆ ಸಂಸ್ಥೆಯು ಬಿಡುಗಡೆಗೊಳಿಸಿರುವ ಅನುದಾನವನ್ನು ಉಲ್ಲೇಖ(3) ರ ಪತ್ರದಲ್ಲಿ ತಿಳಿಸಿರುವ ಚಟುವಟಿಕೆಗಳ ವೆಚ್ಚದ ಪಾವತಿಗೆ ಮಾತ್ರ ಬಳಕೆ ಮಾಡತಕ್ಕದ್ದು, ತಪ್ಪಿದಲ್ಲಿ ಸಂಬಂಧಿಸಿದವರನ್ನೇ ನೇರ ಹೊಣೆಗಾರರನ್ನಾಗಿಸಲಾಗುವುದು. ಮಾಡಿರುವ ವೆಚ್ಚದ ಲೆಕ್ಕಪತ್ರಗಳನ್ನು ನಿರ್ವಹಿಸಿ ತಪಾಸಣೆ ಸಂದರ್ಭದಲ್ಲಿ ಹಾಜರುಪಡಿಸತಕ್ಕದ್ದು ಮತ್ತು ವೆಚ್ಚದ ವರದಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸತಕ್ಕದ್ದು.

Rajesh

ಆಯುಕ್ತರು,
ಜಲಾನಯನ ಅಭಿವೃದ್ಧಿ ಇಲಾಖೆ

**ಪ್ರತಿಗಳು:**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮುಖ್ಯ ಲೆಕ್ಕಾಧಿಕಾರಿಗಳು, ಜಲಾನಯನ ಅಭಿವೃದ್ಧಿ ಇಲಾಖೆ ಇವರಿಗೆ ಸೂಕ್ತ ಕ್ರಮಕ್ಕಾಗಿ
3. Comptroller, ತೋಟಗಾರಿಕೆ ವಿಶ್ವವಿದ್ಯಾಲಯ, ಬಾಗಲಕೋಟೆ ಇವರಿಗೆ ಸೂಕ್ತ ಕ್ರಮಕ್ಕಾಗಿ
4. ಆದೇಶದ ಕಡತಕ್ಕೆ / ಕಛೇರಿ ಪ್ರತಿ